# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **502** |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಂ.ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.03.2020 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಇರುವ ಮಾನದಂಡಗಳೇನು; ಹಾಸನ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; ಮತ್ತು ಈ ಅಂಗಡಿಗಳು ಯಾರ ಹೆಸರಿನಲ್ಲಿ ಪ್ರಾರಂಭವಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ಹೊಸ ನ್ಯಾಯಬೆಲೆ ಅಂಗಡಿಗಳಿಗೆ ಅರ್ಜಿ ಸಲ್ಲಿಸಲು ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ತಿದ್ದುಪಡಿ ಆದೇಶ ದಿನಾಂಕ: 21-05-2018ರಂತೆ ಕೆಳಕಂಡಂತೆ ಆದ್ಯತೆ ನೀಡಲಾಗಿರುತ್ತದೆ.<br>ಎ) ಸರ್ಕಾರದ ನಿಗಮಗಳು/ಗ್ರಾಮ ಪಂಚಾಯಿತಿ/ಸ್ಥಳೀಯ ನಗರ ಸಂಸ್ಥೆಗಳು<br>ಬಿ) ಸಹಕಾರ ಸಂಘಗಳು.<br>1. ಟಿಎಪಿಸಿಎಂಎಸ್/ಕೋ-ಅಪರೇಟಿವ್ ಮಾರ್ಕೆಂಟಿಂಗ್ ಸೊಸೈಟಿಗಳು.<br>2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ವಿ.ಎಸ್.ಎಸ್.ಎನ್<br>3. ಹಾಫ್ ಕಾಮ್ಸ್<br>4. ಅಧಿಕೃತ ನೋಂದಣಿಯಾದ ಸಹಕಾರ ಸಂಘಗಳು<br>5. ಅಧಿಕೃತ ನೋಂದಣಿಯಾದ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು<br>6. ನೋಂದಣಿಯಾದ ಆದಿವಾಸಿ ವಿವಿದೋದ್ದೇಶ ಸಹಕಾರ ಸಂಘಗಳು.<br>7. ನೋಂದಣಿಯಾದ ನೇಕಾರರ ಸಹಕಾರ ಸಂಘಗಳು<br>8. ನೋಂದಣಿಯಾದ ಮಹಿಳಾ ವಿವಿದೋದ್ದೇಶ ಸಹಕಾರ ಸಂಘಗಳು<br>9. ನೋಂದಣಿಯಾದ ವಿವಿದೋದ್ದೇಶ ಸಹಕಾರ ಸಂಘಗಳು<br>10. ಅಂಗವಿಕಲರ ಕಲ್ಯಾಣ ಸಹಕಾರ ಸಂಘಗಳು<br>11. ಸಹಕಾರ ಸಂಘಗಳು ನಡೆಸುವ ಬ್ಯಾಂಕ್ ಅಥವಾ ಕೋ-ಆಪರೇಟಿವ್ ಬ್ಯಾಂಕುಗಳು.<br>ಸಿ) ಖಾಸಗಿ-ವಿಕಲಚೇತನರ ವರ್ಗBench mark disability (ಪ್ರಾರಂಭಿಕವಾಗಿ 400 ನ್ಯಾಯಬೆಲೆ ಅಂಗಡಿಗಳು) ಮತ್ತು ಮಂಗಳಮುಖಿಯರ ವರ್ಗ (ಪ್ರಾರಂಭಿಕವಾಗಿ 30 ನ್ಯಾಯಬೆಲೆ ಅಂಗಡಿಗಳು)<br>ಮೇಲ್ಕಂಡ ಸಹಕಾರ ಸಂಘಗಳ ಗುಣಮಟ್ಟವನ್ನು ಅವರಿಗೆ ನೀಡಲಾಗಿರುವ ಆಡಿಟ್ ವರದಿಯ ಮೇಲೆ ಪರಿಗಣಿಸಲಾಗುವುದು ಮತ್ತು ಸದರಿ ಸಹಕಾರ ಸಂಘಗಳು 03 ವರ್ಷಗಳಿಗಿಂತ ಹಿಂದಿನವುಗಳಾಗಿರಬೇಕು ಹಾಗೂ ಕಳೆದ 2 ವರ್ಷಗಳಿಂದ ನಿರಂತರವಾಗಿ ರೂ.200000/-ದಷ್ಟು ಮೊತ್ತದ ಬ್ಯಾಂಕ್ ಬ್ಯಾಲೆನ್ಸ್ ಹೊಂದಿರಬೇಕು.<br>ಎರಡು ತಿಂಗಳ ಪಡಿತರ ಹಂಚಿಕೆಯ ಆಹಾರಧಾನ್ಯ ಪ್ರಮಾಣವನ್ನು ಶೇಖರಿಸಿಡಲು ಸಾಕಷ್ಟು ಸಂಗ್ರಹಣಾ ಸಾಮರ್ಥ್ಯದ ಮಳಿಗೆ ಜಾಗವನ್ನು |

<table>
<tr>
<td></td>
<td></td>
<td>ಕೂಡ ಹೊಂದಿರಬೇಕು.<br>ಹಾಸನ ಜಿಲ್ಲೆಯಲ್ಲಿ ಒಟ್ಟು 873 ನ್ಯಾಯಬೆಲೆ ಅಂಗಡಿಗಳು ಇವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಸಂ</th><th>ತಾಲ್ಲೂಕು</th><th>ಸಹಕಾರ ಸಂಘಗಳು</th><th>ಸಂಘಗಳು</th><th>ಖಾಸಗಿ ವ್ಯಕ್ತಿಗಳು</th><th>ಒಟ್ಟು</th></tr>
<tr><td>1</td><td>ಆಲೂರು</td><td>13</td><td>5</td><td>26</td><td>44</td></tr>
<tr><td>2</td><td>ಅರಕಲಗೂಡು</td><td>11</td><td>14</td><td>61</td><td>86</td></tr>
<tr><td>3</td><td>ಅರಸೀಕೆರೆ</td><td>20</td><td>33</td><td>153</td><td>206</td></tr>
<tr><td>4</td><td>ಬೇಲೂರು</td><td>24</td><td>10</td><td>52</td><td>86</td></tr>
<tr><td>5</td><td>ಚನ್ನರಾಯಪಟ್ಟಣ</td><td>35</td><td>24</td><td>43</td><td>102</td></tr>
<tr><td>6</td><td>ಹಾಸನ</td><td>47</td><td>30</td><td>93</td><td>170</td></tr>
<tr><td>7</td><td>ಹೊಳೆನರಸೀಪುರ</td><td>18</td><td>1</td><td>99</td><td>118</td></tr>
<tr><td>8</td><td>ಸಕಲೇಶಪುರ</td><td>11</td><td>14</td><td>36</td><td>61</td></tr>
<tr><td colspan="2">———</td><td>179</td><td>131</td><td>563</td><td>873</td></tr>
</table>
ಹಾಸನ ಜಿಲ್ಲೆಯಲ್ಲಿರುವ ತಾಲ್ಲೂಕುವಾರು ನ್ಯಾಯಬೆಲೆ ಅಂಗಡಿಗಳ ಹೆಸರು ಹಾಗೂ ಅವುಗಳ ಪ್ರಾಧಿಕರಣದಾರರ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td>
</tr>
<tr>
<td>ಆ</td>
<td>ನ್ಯಾಯಬೆಲೆ ಅಂಗಡಿಯನ್ನು ಹೊಂದಿರುವವರು ಮರಣ ಹೊಂದಿದಲ್ಲಿ ಅವರು ನಡೆಸುತ್ತಿರುವ ಅಂಗಡಿಯನ್ನು ಅವರ ವಾರಸುದಾರರಿಗೆ ನೀಡಲು ಅವಕಾಶವಿದೆಯೇ; ( ಮಾಹಿತಿ ನೀಡುವುದು)</td>
<td>ಅವಕಾಶವಿದೆ.<br>ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆಯ ನಿಯಂತ್ರಣಾ ಆದೇಶ 2016 ರ ಕಲಂ 13ರಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.<br>1. ಪ್ರಾಧಿಕಾರರ ಹೊಂದಿರುವವರು ಮೃತಪಟ್ಟ ಸಂದರ್ಭದಲ್ಲಿ 65 ವರ್ಷ ಮೀರಿರಬಾರದು.<br>2. ಅನುಕಂಪದ ಆಧಾರದ ಅರ್ಜಿ ಮೃತಪಟ್ಟ ದಿನಾಂಕದ 90 ದಿನಗಳೊಳಗಾಗಿ ಸಲ್ಲಿಸಬೇಕು.<br>3. ಮೃತರ ಮಗಳು/ಮಗ 18 ವರ್ಷ ಮೇಲ್ಪಟ್ಟು ವಯಸ್ಸಿನವರಾಗಿರಬೇಕು ಹಾಗೂ ಮಗ 30ವರ್ಷದ ಒಳಗಿರತಕ್ಕದ್ದು. ಅವಿವಾಹಿತ ಮಗಳು 40 ವರ್ಷದ ಒಳಗಿರತಕ್ಕದ್ದು. ಪತಿ/ಪತ್ನಿ 65 ವರ್ಷ ಮೀರಿರಬಾರದು.<br>4. ಕನಿಷ್ಠ ವಿದ್ಯಾರ್ಹತೆ 10ನೇ ತರಗತಿ ಉತ್ತೀರ್ಣ.<br>ಅನುಕಂಪದ ಆಧಾರದ ಮೇಲೆ ನೀಡುವ ಪ್ರಾಧಿಕರಣದ ಅವಧಿ 3 ವರ್ಷಗಳು ಮಾತ್ರ.</td>
</tr>
<tr>
<td>ಇ</td>
<td>ನ್ಯಾಯಬೆಲೆ ಅಂಗಡಿಯ ಮಾಲೀಕರು ಸರ್ಕಾರ ನಿಗಧಿಪಡಿಸಿರುವ ಪ್ರಮಾಣದ ದಿನಸಿ ಸಾಮಾಗ್ರಿಗಳನ್ನು ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ದಾರರಿಗೆ</td>
<td>1. ಕೇಂದ್ರೀಕೃತವಾಗಿ ಆಯುಕ್ತರ ಕಛೇರಿಯಿಂದಲೇ ಆನ್‌ಲೈನ್‌ನಲ್ಲಿ ಮಾಹೆವಾರು, ತಾಲ್ಲೂಕುವಾರು, ಗೋದಾಮುವಾರು ಪಡಿತರ ಚೀಟಿಗಳಿಗೆ ಪಡಿತರ ಹಂಚಿಕೆ ನೀಡಲಾಗುತ್ತಿದೆ.</td>
</tr>
</table>

| | | |
|---|---|---|
| | ವಿತರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಯಾವ ಮಾನದಂಡಗಳನ್ನು ಅನುಸರಿಸುತ್ತಿದೆ; ( ಮಾಹಿತಿ ನೀಡುವುದು) | 2. ಆನ್‌ಲೈನ್‌ನಲ್ಲಿ ಪಡಿತರ ಹಂಚಿಕೆ ನೀಡಿದ ಕೂಡಲೇ ಪಡಿತರ ಚೀಟಿದಾರರ ನೊಂದಾಯಿತ ಮೊಬೈಲ್ ಸಂಖ್ಯೆಗಳಿಗೆ sms ಪಡಿತರ ಹಂಚಿಕೆ ಬಗ್ಗೆ ಸಂದೇಶ ಕಳುಹಿಸಲಾಗುತ್ತಿದೆ.<br>3. ಪಾಯಿಂಟ್ ಆಫ್ ಸೇಲ್(pos) ವ್ಯವಸ್ಥೆಯಡಿ ಪಡಿತರ ಚೀಟಿದಾರರ ಆಧಾರ್ ದೃಢೀಕೃತ ಬೆರಳಚ್ಚು ಪಡೆದು ಪಡಿತರ ವಿತರಣೆ ಮಾಡಲಾಗುತ್ತಿದೆ. ಪಡಿತರ ವಿತರಿಸುವಾಗ ಕಂಪ್ಯೂಟರ್‌ನಲ್ಲಿಯೂ ಆಯಾ ಕಾರ್ಡುದಾರರಿಗೆ ಹಂಚಿಕೆಯಾಗಿರುವ ಪ್ರಮಾಣ ತೋರಿಸುತ್ತದೆ.<br>4. ಪಡಿತರ ವಿತರಣೆಯಲ್ಲಿ ವ್ಯತ್ಯಾಸವಾದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಥವಾ ಜಿಲ್ಲಾ ಕಛೇರಿಗೆ ದೂರು ನೀಡಬಹುದಾಗಿರುತ್ತದೆ ಮತ್ತು ಸಹಾಯವಾಣಿ ಸಂಖ್ಯೆ: 1967 ಗೆ ಕರೆ ಮಾಡಿ ದೂರು ನೀಡಬಹುದಾಗಿರುತ್ತದೆ.<br>ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಜಾಗೃತಿ ಸಮಿತಿಗಳು ರಚನೆಯಾಗಿದ್ದು, ಕಾರ್ಯನಿರ್ವಹಿಸುತ್ತಿವೆ. |
| ಈ | ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ಕಾರ ನಿಗಧಿಪಡಿಸಿರುವ ಪ್ರಮಾಣದ ದಿನಸಿ ಸಾಮಾಗ್ರಿಗಳನ್ನು ನೀಡದೆ. ಅವ್ಯವಹಾರದಲ್ಲಿ ತೊಡಗಿರುವ ಪ್ರಕರಣಗಳು ಕಂಡು ಬಂದಿದೆಯೇ; ಕಂಡುಬಂದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಅಂಗಡಿ ಮಾಲೀಕರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? ( ಪ್ರಕರಣವಾರು ಮಾಹಿತಿ ನೀಡುವುದು) | ಹಾಸನ ಜಿಲ್ಲೆಯಲ್ಲಿ ಸರ್ಕಾರ ನಿಗಧಿಪಡಿಸಿರುವ ಪ್ರಮಾಣದ ದಿನಸಿ ಸಾಮಾಗ್ರಿಗಳನ್ನು ನೀಡದಿರುವ 10 ಪ್ರಕರಣಗಳು ಕಂಡುಬಂದಿದ್ದು, 9 ನ್ಯಾಯ ಬೆಲೆ-ಅಂಗಡಿ ಪ್ರಾಧಿಕಾರಗಳನ್ನು ಅಮಾನತ್ತುಪಡಿಸಿದ್ದು, 1 ನ್ಯಾಯಬೆಲೆ ಅಂಗಡಿಯನ್ನು ರದ್ದುಪಡಿಸಲಾಗಿದೆ. (ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.) |

**ಆನಾಸ 18 ಆನಾಸ 2020 (ಇ-ಆಫೀಸ್)**

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.